ಕರ್ನಾಟಕ ಸರ್ಕಾರ

ರಾಷ್ಟ್ರೀಯ ಸೇವಾ ಯೋಜನೆ

ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560012

ಸಂಖ್ಯೆ: ಪಪೂಶಿಇ/ರಾಸೇಯೋ/ವಿ.ಶಿ./2017-18 ದಿನಾಂಕ: 23/12/2017

ಜ್ಞಾಪನ

ವಿಷಯ: ದಿನಾಂಕ: 17-01-2018 ರಿಂದ 19-01-2018ರ ವರೆಗೆ ನಡೆಯಲಿರುವ ಬೆಳಗಾಂ ವಿಭಾಗ ಮಟ್ಟದ ಬಾಲಕರ ನಾಯಕತ್ವ ಶಿಬಿರಕ್ಕೆ ಬಾಲಕರನ್ನು ನಿಯೋಜಿಸುವ ಬಗ್ಗೆ.

ಪದವಿಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಮತ್ತು ಸಿ.ಐ.ಸಿ ಪದವಿ ಪೂರ್ವ ಮಹಾವಿದ್ಯಾಲಯ, ಅದರಗುಂಚಿ ಹುಬ್ಬಳ್ಳಿ ತಾ: ಧಾರವಾಡ -580212. ಇವರ ಸಂಯುಕ್ತ ಆಶ್ರಯದಲ್ಲಿ ಬೆಳಗಾಂ ವಿಭಾಗ ಮಟ್ಟದ ಬಾಲಕರ 'ವಿಜ್ಞಾ ನ ಮತ್ತು ವೈಜ್ಞಾ ನಿಕ ಮನೋಭಾವನೆಗಾಗಿ ವಿದ್ಯಾರ್ಥಿಗಳು ಶಿಬಿರವನ್ನು "ಆರೋಗ್ಯವಂತ ಭಾರತಕ್ಕಾಗಿ ಆರೋಗ್ಯವಂತ ಯುವಕರು"ಎಂಬ ಧ್ಯೇಯದೊಂದಿಗೆ ದಿನಾಂಕ: 17-01-2018 ರಿಂದ 19-01-2018ರ ವರೆಗೆ ಕಾಲೇಜಿನ ಹತ್ತಿರ ಇರುವ ದಿ॥ ಶ್ರೀಮತಿ ಚನ್ನಬಸವ ಕಲ್ಯಾಣ ಮಂಟಪ ಇಲ್ಲಿ ಆಯೋಜಿಸಲಾಗಿದೆ. ಈ ಶಿಬಿರಕ್ಕೆ ತಮ್ಮ ಕಾಲೇಜಿನ ಉತ್ತಮ ಆರೋಗ್ಯವಂತ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ 02 ಬಾಲಕರನ್ನು ನಿಯೋಜಿಸಲು ಸೂಚಿಸಿದೆ. ನಿಯೋಜನೆಗೊಂಡ ಬಾಲಕರು ದಿ॥ ಶ್ರೀಮತಿ ಚನ್ನಬಸವ್ವ ಕಲ್ಯಾಣ ಮಂಟಪದಲ್ಲಿ ದಿನಾಂಕ: 17-01-2018 ರ ಬೆಳಿಗ್ಗೆ 8.00 ಗಂಟೆಗೆ ಶಿಬಿರ ನಡೆಯುವ ಸ್ಥಳದಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದೆ.

ಶಿಬಿರಾರ್ಥಿಗಳು ಶಿಬಿರಕ್ಕೆ ಆಗಮಿಸುವಾಗ ಈ ಕೆಳಕಂಡ ಸೂಚನೆಗಳನ್ನು ಗಮನಿಸಬೇಕು.

1. ಶಿಬಿರಕ್ಕೆ ಆಗಮಿಸುವಾಗ ಗುರುತಿನ ಪತ್ರ, ಇಂಡೆಮ್ನಿಟಿ ಬಾಂಡ್/ತಂದೆ/ತಾಯಿ/ಪೋಷಕರ ಒಪ್ಪಿಗೆ ಪತ್ರ (ಕಡ್ಡಾಯವಾಗಿ ತರಬೇಕು)
2. ಪ್ರಾಂಶುಪಾಲರು ಮತ್ತು ಕಾರ್ಯಕ್ರಮಾಧಿಕಾರಿಗಳಿಂದ ನಿಯೋಜನೆ ಪತ್ರ ತರಬೇಕು.
3. ಊಟದ ತಟ್ಟೆ, ಲೋಟ, ಲಘು ಹಾಸಿಗೆ ಮತ್ತು ಹೊದಿಕೆ, ಉಡುಪು, ಟಾರ್ಚ ಇತರೆ ವಸ್ತುಗಳನ್ನು ತರಬೇಕು.
4. ಶಿಬಿರಕ್ಕೆ ಆಗಮಿಸುವ ಶಿಬಿರಾರ್ಥಿಗಳ ಪ್ರಯಾಣ ಭತ್ಯೆ ಎನ್.ಎಸ್.ಎಸ್. ದೈನಂದಿನ ಚಟುವಟಿಕೆ ನೀಡಿದ ಅನುದಾನದಿಂದ ಭರಿಸಲು ಸೂಚಿಸಿದೆ.
5. ಶಿಬಿರದ ನಿಯಮಗಳನ್ನು ಶಿಬಿರಾರ್ಥಿಗಳು ಕಡ್ಡಾಯವಾಗಿ ಪಾಲಿಸಬೇಕು ಮತ್ತು ಬೆಲೆ ಬಾಳುವ ವಸ್ತುಗಳನ್ನು ಶಿಬಿರಕ್ಕೆ ತರಬಾರದು.

ತಮ್ಮ ವಿಶ್ವಾಸಿ

ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳು
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

ಮಾಹಿತಿಗಾಗಿ ಸಂಪರ್ಕಿಸಿ:

ಶ್ರೀ ಆರ್. ಎಫ್.ಭರಮಗೌಡ್ರ, ಪ್ರಾಚಾರ್ಯರು -9986944706, 9448337300

ಶ್ರೀ ಕೆ.ಎಸ್. ಕಂಬದೋಳಿ ಪ್ರಾಂಶುಪಾಲರು - 9448337300

ಶ್ರೀ ಪಿ.ಎಸ್. ಗಿರಿರಾಜ್(ಸಹಾಯಕ ಸಂಯೋಜನಾಧಿಕಾರಿಗಳು ಬೆಳಗಾಂ ವಿಭಾಗ)ಮೊ : 9448717445

ಶ್ರೀ ಜಿ ಸಿ ಗುಂಡಣ್ಣವರ್ -ಶಿಬಿರಾಧಿಕಾರಿಗಳು- 9740733019

ಶಿಬಿರ ನಡೆಯುವ ಸ್ಥಳ: ಶ್ರೀ ಚನ್ನಬಸವ ಕಲ್ಯಾಣ ಮಂಟಪ ಅದರಗುಂಚಿ.

ಬಸ್ ಮಾರ್ಗ : ಹುಬ್ಬಳ್ಳಿ ಯಿಂದ ಕುಂದಗೋಳ್ ಬಸ್ಸ್ ಹತ್ತಿ ಅದರಗುಂಚಿ ಬಸ್ಸ್ ನಿಲ್ದಾಣದಲ್ಲಿ ಇಳಿಯುವುದು